ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ನಿಮ್ಮದೊಂದೇ ಪ್ರಶ್ನೆಗೆ ನಾನು ೧೦-೧೫ ನಿಮಿಷ ತೆಗೆದುಕೊಂಡರೆ, ಉಳಿದ ಪ್ರಶ್ನೆಗಳ ಗತಿ ಏನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ.

ಶ್ರೀ ಧರ್ಮಸಿಂಗ್ : ಉತ್ತರವಲ್ಲ, ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ನೀವು ಪದೇ ಪದೇ ಎದ್ದು ನಿಂತುಕೊಂಡರೆ ಅವರು ಏಳಲೇಬೇಕಾಗುತ್ತದೆ. ಹಿರಿಯ ಸದಸ್ಯರಾದ ನೀವು ಸಭಾ ನಿಯಮಗಳನ್ನು ನೀವು ಪಾಲಿಸಿ.

ಶ್ರೀ ಧರ್ಮಸಿಂಗ್ : ಒಂದು ಸಲ ಸಮಯ ಕೊಟ್ಟಾಗ ಅವರು ದೆಹಲಿಗೆ ಹೋಗಿದ್ದರು. ಎರಡನೇ ಸಲ ಅವರ ತಾಯಿಯವರು ತೀರಿಕೊಂಡಿದ್ದರು. ಇನ್ನೊಂದು ಸಲ ಮೀಟಿಂಗ್ ಫಿಕ್ಸ್ ಮಾಡಿ ಇದನ್ನು ಇತ್ಯರ್ಥ ಮಾಡೋಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೨೫
ಸದಸ್ಯರ ಹೆಸರು : ಶ್ರೀ ಐವಾನ್ ನಿಗ್ಲಿ (ನಾಮಾಂಕಿತ)
ವಿಷಯ : ಅಲ್ಪಸಂಖ್ಯಾತರಿಗೆ ವಸತಿ ಶಾಲೆಗಳು
ಸಚಿವರ ಹೆಸರು ಮತ್ತು ಪದನಾಮ : ಶ್ರೀ ಜಬ್ಬಾರ್ ಖಾನ್ ಹೊನ್ನಾಳಿ
(ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು)

ಕ್ರ.ಸಂ.	ಪ್ರಶ್ನೆ
ಅ.	ಅಲ್ಪಸಂಖ್ಯಾತರಿಗೆ ಬೆಂಗಳೂರಿನ ಆಸುಪಾಸಿನಲ್ಲಿ ವಸತಿ ಶಾಲೆಯನ್ನು ತೆರೆಯಲು ಕೈಗೊಂಡ ಕ್ರಮವೇನು:

ಉತ್ತರ

೨೦೦೫-೦೬ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಅಲ್ಪಸಂಖ್ಯಾತರಿಗೆ ೧೩ ಹೊಸ ವಸತಿ ಶಾಲೆಗಳನ್ನು ಪ್ರಾರಂಭಿಸಲು ಘೋಷಿಸಿರುತ್ತದೆ. ಒಂದನ್ನು ಬೆಂಗಳೂರಿನ ಆಸುಪಾಸಿನಲ್ಲಿ ಪ್ರಾರಂಭಿಸಲಾಗುವುದು.

ಕ್ರ.ಸಂ.	ಪ್ರಶ್ನೆ
ಆ.	ಹಾಗಿದ್ದರೆ, ಆಂಗ್ಲೋ ಇಂಡಿಯನ್ ಸಮಾಜಕ್ಕೆ ಒಂದು ವಸತಿ ಶಾಲೆ ಒದಗಿಸಲು ಕೈಗೊಂಡ ಕ್ರಮವೇನು: (ಸ್ಥಳದ ಬಗ್ಗೆ ವಿವರ ನೀಡುವುದು)

ಉತ್ತರ

ವಸತಿ ಶಾಲೆಗಳನ್ನು ಅಲ್ಪಸಂಖ್ಯಾತರ ಜಾತಿ/ಮತ ಆಧಾರದ ಮೇಲೆ ಮಂಜೂರು ಮಾಡುವುದಿಲ್ಲ. ಆದ್ದರಿಂದ ಆಂಗ್ಲೋ ಇಂಡಿಯನ್ ಸಮಾಜಕ್ಕೆ ಜಾತಿ/ಮತದ ಆಧಾರದ ಮೇಲೆ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅಲ್ಪಸಂಖ್ಯಾತರಲ್ಲಿ ಶೇಕಡ ೧೪ ರಷ್ಟು ವಸತಿ ಶಾಲೆಗಳನ್ನು ಕ್ರೈಸ್ತರಿಗೆ ಮೀಸಲಿರಿಸಿದೆ.

ಕ್ರ.ಸಂ.	ಪ್ರಶ್ನೆ
೩.	ಆಂಗ್ಲೋ ಇಂಡಿಯನ್ನು ಸಮಾಜಕ್ಕೆ ಶೇಕಡ ೧೦೦ರಷ್ಟು ಹಣ ಮರು ಪಾವತಿ ಮಾಡಲು ಕೈಗೊಂಡ ಕ್ರಮವೇನು?

ಉತ್ತರ

೩. ಆಂಗ್ಲೋ ಇಂಡಿಯನ್ ಸಮುದಾಯದ ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿ ಕೆಳಕಂಡಂತಿದೆ.

೧. ರಾಜ್ಯ ಪಠ್ಯ ಪುಸ್ತಕಗಳ ಪಠ್ಯ ಕ್ರಮಗಳನುಸಾರ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ಮರುಪಾವತಿ ಮಾಡಲಾಗುತ್ತದೆ.

೨. ಕೇಂದ್ರ ಪಠ್ಯ ಪುಸ್ತಕಗಳ ಪಠ್ಯಕ್ರಮಗಳನ್ನು ಅನುಸರಿಸುವ ವಿದ್ಯಾರ್ಥಿಗಳಿಗೆ ತಲಾ ರೂ. ೩೦೦೦/- ರಂತೆ ಮರು ಪಾವತಿಸಲಾಗುವುದು.

ಶ್ರೀ ಐವಾನ್ ನಿಗ್ಲಿ : I would like to ask the government. Whether a residential school will be allotted to the Anglo Indian community. In the budget 2005-06, it is mentioned 13 residential colleges will be started One of them will be opened around Bangalore. Out of 13 colleges for minorities, whether the first language will be in Kannada, Urdu or English? I request the government that the school which is going to come up in Bangalore may be given for the Anglo Indian Community. Since, we have only one school in Bangalore, which is not a residential one. I would request the government to allot one residential school with English medium around Bangalore for the Anglo Indian community. Secondly, when it comes to the reimbursement, it is given to those students, who study state text books and syllabus full fee reimbursement will be given and....

ಅಧ್ಯಕ್ಷರು : ಪ್ರಶ್ನೆ ಕೇಳಿ.

ಶ್ರೀ ಐವಾನ್ ನಿಗ್ಲಿ : ಸಾರ್, ಪ್ರಶ್ನೆಯನ್ನೇ ಕೇಳುತ್ತಿರುವುದು. Whether you will give 100% reimbursement for the Anglo Indian

community or not?

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರದಿಂದ ೧೩ ರೆಸಿಡೆನ್‌ಷಿಯಲ್ ಶಾಲೆಗಳನ್ನು ಬಜೆಟ್‌ನಲ್ಲಿ ಅನೌನ್ಸ್ ಮಾಡಲಾಗಿದೆ. ಪ್ರತಿಯೊಂದು ಜಿಲ್ಲೆಗೆ ಅಲ್ಪಸಂಖ್ಯಾತರಿಗೆ ಎಂದು ಇದೆ. ವಿಶೇಷವಾಗಿ ಆಂಗ್ಲೋ ಇಂಡಿಯನ್‌ಗೆ ಎಂದು ಬರುವುದಿಲ್ಲ. ಎಲ್ಲ ಸಮುದಾಯದವರಿಗೆ ಎಂದರೆ ಮೈನಾರಿಟಿಯಲ್ಲಿ ಬರತಕ್ಕಂತಹ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬುದ್ ಮತ್ತು ಪಾರ್ಸಿ ಈ ಎಲ್ಲ ಜನರಿಗೆ ರೆಸಿಡೆನ್‌ಷಿಯಲ್ ಶಾಲೆಗಳು ಇವೆ ಹೊರತಾಗಿ ಆಂಗ್ಲೋ ಇಂಡಿಯನ್‌ಗೆ ಸಪರೇಟ್ ಎಂದು ಏನೂ ಇಲ್ಲ. ಅದರ ಮೀಡಿಯಮ್ ಕನ್ನಡ ಇದೆ. ಪ್ರತ್ಯೇಕವಾಗಿ ಜಾತಿ ಆಧಾರದ ಮೇಲೆ ಯಾವುದೇ ರೆಸಿಡೆನ್ಷಿಯಲ್ ಸ್ಕೂಲ್ ಸ್ಥಾಪನೆಗೆ ನಾವು ಯಾವುದೇ ಯೋಜನೆ ಸರ್ಕಾರದಲ್ಲಿ ಹಾಕಿಕೊಂಡಿಲ್ಲ. ರಿಎಂಬರ್ಸ್‌ಮೆಂಟ್ ಸಲುವಾಗಿ ಹೇಳಿದ್ದಾರೆ, ಸ್ಟೇಟ್‌ನಲ್ಲಿ ರೆಸಿಡೆನ್ಷಿಯಲ್ ಶಾಲೆ ಒಳಗೆ ಯಾವುದೇ ಖರ್ಚು ಬಂದಿದ್ದು ಸರ್ಕಾರ ಫ್ರೀ ಕೊಡುತ್ತದೆ. ಸೆಂಟ್ರಲ್ ಗವರ್ನಮೆಂಟ್‌ಗೆ ಸಂಬಂಧಪಟ್ಟ ಬುಕ್ ಅವರು ತೆಗೆದುಕೊಂಡರೆ ೩,೦೦೦ ರೂಪಾಯಿ ಪ್ರತಿಯೊಂದು ಹುಡುಗನಿಗೆ ಸರ್ಕಾರದ ವತಿಯಿಂದ ಕೊಡುತ್ತೇವೆ.

ಶ್ರೀ ಐವಾನ್ ನಿಗ್ಲಿ : ಸನ್ಮಾನ್ಯ ಅಧ್ಯಕ್ಷರೇ, ಜಾತಿ ಆಧಾರದ ಮೇಲೆ ನನಗೆ ಈ ಪೋಸ್ಟ್ ಕೊಟ್ಟಿದ್ದಾರೆ.

ಅಧ್ಯಕ್ಷರು : ಜಾತಿ ಮೇಲೆ ನಿಮಗೆ ಕೊಟ್ಟರೆ ಕಾನೂನಿನಲ್ಲಿ ಅವಕಾಶ ಇಲ್ಲವೆಂದು ಹೇಳುತ್ತಾರೆ. ಅದನ್ನು ಕೇಳಿ.

Sri Ivan Nigli : I have been nominated as an Anglo Indian MLA under Articles 333 of the constitution to safeguard the demands of the Anglo Indian community. Our mother tongue is English. So, I want English medium residential school in Bangalore city. That is my question. The second thing is, why this discrimination? Only students those who are studying in state syllabus are getting full fee reimbursement whereas the Central Government students, they are not getting full fee reimbursement.

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮಗೆ ಹೇಳಿದ ಹಾಗೆ ಪ್ರತ್ಯೇಕವಾಗಿ ಜಾತಿ ಆಧಾರದ ಮೇಲೆ ಕೊಡುವುದಿಲ್ಲ. ನಿಮಗೆ ಏನು ಎಮ್‌ಎಲ್‌ಎ ಸೀಟ್ ಕೊಟ್ಟಿದ್ದಾರೆ...

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಾವು ಕೂತು ಕೇಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಅವರು ಏನು ಕೇಳುತ್ತಾರೆಂದು ಇವರಿಗೆ ಅರ್ಥವಾಗುವುದಿಲ್ಲ. ನಾವು ಸುಮ್ಮನೆ ಕೂತಿರಬೇಕು ಬಹಳ ಕಷ್ಟವಾಗುತ್ತದೆ. ಅವರು ಏನು ಕೇಳುತ್ತಾರೆಂದು ಗ್ರಹಿಸದೆ ಉತ್ತರ ಕೊಡುತ್ತಾ ಹೋದರೆ ನಾವು ಹೇಗೆ ಅಧ್ಯಕ್ಷರೆ, ಇಲ್ಲಿ ಕೂತುಕೊಳ್ಳುವುದು? ತಾಳ್ಮೆ ಎಷ್ಟೆಂದು ಇರುತ್ತದೆ? This is a punishment. You must understand that the Hon'ble Member is asking.

ಅವರು ಏನು ಕೇಳುತ್ತಾರೆಂದರೆ, ಸ್ಟೇಟ್ ಗವರ್ನಮೆಂಟ್ ಸಿಲಬಸ್‌ಗೆ ೧೦೦ ಪರ್ಸೆಂಟ್ ರಿಎಂಬರ್ಸ್‌ಮೆಂಟ್ ಮಾಡುತ್ತಿದ್ದಾರೆ. ಸೆಂಟ್ರಲ್ ಸಿಲಬಸ್‌ಗೆ ಕೊಡಬೇಕೆಂದು, ಈ ಡಿಸ್ಕ್ರಿಮಿನೇಷನ್ ಏಕೆ ಮಾಡುತ್ತೀರಿ ನಾವು ಆಂಗ್ಲೋ ಇಂಡಿಯನ್ ಕಮ್ಯುನಿಟಿಯವರು ನಮ್ಮ ಮದರ್ ಟಂಗ್ ಪೂರ್ಣ ಇಂಗ್ಲಿಷ್ ಇರುತ್ತದೆ. ಆರ್ಟಿಕಲ್ ೩೩೩ ಪ್ರಕಾರ ನನ್ನನ್ನು ನಾಮಿನೇಟ್ ಮಾಡಿದ್ದೀರಿ, ನಮ್ಮದು ಈ ಕೋಡ್ ಎಂದು ಹೇಳಿದರೆ ನೀವು ಹೇಳಿದ್ದೇ ಹೇಳುತ್ತಾ ಹೋಗುತ್ತಿದ್ದೀರಿ.

ಶ್ರೀ ಜಬ್ಬಾರ್‌ಖಾನ್ ಹೊನ್ನಾಳಿ : ಮಾನ್ಯ ಅಧ್ಯಕ್ಷರೆ, ಸ್ಟೇಟ್ ಲೆವಲ್‌ನಲ್ಲಿ ರೆಸಿಡೆನ್ಷಿಯಲ್ ಶಾಲೆ ಒಳಗೆ ಸ್ಟೇಟ್ ಟಿಕ್ಸ್‌ಬುಕ್ಸ್ ಸರ್ಕಾರದಿಂದ ಕೊಡುತ್ತೇವೆ, ಸೆಂಟ್ರಲ್ ಗವರ್ನಮೆಂಟ್ ಸಿಲಬಸ್ ಇದ್ದರೆ ಆ ಹುಡುಗರಿಗೆ ೩,೦೦೦ ರೂಪಾಯಿ ಪ್ರತಿ ಹುಡುಗರಿಗೆ ಕೊಡುತ್ತೇವೆ. ಇಂಗ್ಲಿಷ್ ಮೀಡಿಯಮ್ ಶಾಲೆಗೆ ಅವರು ಏನು ಕೇಳಿದ್ದಾರೆ...

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಇವರು ಇಂಗ್ಲಿಷ್ ಮೀಡಿಯಂ ಶಾಲೆ ತೆಗೆಯುವುದು ಬೇಡ, ಇವರು ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿಯೇ ಕಲಿಯುತ್ತಾರೆ, ಆಗ ನೀವು ಈ ರಿಎಂಬರ್ಸ್‌ಮೆಂಟ್ ಮಾಡುತ್ತೀರಾ? ಅದನ್ನಾದರೂ ಹೇಳಿ.

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ : ಇದೂವರೆಗೆ ನಮ್ಮಲ್ಲಿ ಆ ಯೋಜನೇ ಇಲ್ಲ, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಜಬ್ಬಾರ್‌ಖಾನ್ ಸಾಹೇಬರೇ ಹಾಗಲ್ಲ, ಅವರು

ಆಂಗ್ಲೋ ಇಂಡಿಯನ್ ಕಮ್ಯುನಿಟಿಯಿಂದ ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಈ ಒಂದು ವರ್ಗ ಉಳಿದುಕೊಂಡವರು. ಅವರಿಗೆ ಒಂದು ವಿಶೇಷ ಸವಲತ್ತು ಸಂವಿಧಾನದಲ್ಲಿ ಕೊಟ್ಟಿದ್ದೇವೆ. ಅವರನ್ನು ಈ ಸಭೆಗೆ ನಾಮಕರಣ ಮಾಡಿದ್ದೇವೆ. ಸರ್ಕಾರದ ಶಿಫಾರಸ್ಸಿನ ಮೇಲೆ ರಾಜ್ಯಪಾಲರು ಮಾಡಿದ್ದಾರೆ. ಈ ಮಕ್ಕಳು ಸೆಂಟ್ರಲ್ ಸಿಲಿಬಸ್ ಏನು ಓದುತ್ತಾರೆ ಅವರಿಗೆ ೧೦೦ ಪರ್ಸೆಂಟ್ ರಿಎಂಬರ್ಸ್‌ಮೆಂಟ್ ಕೊಡುವುದಕ್ಕೆ ನಿಮಗೆ ನೋಟೀಸ್ ಬೇಕಾ. ಒಂದು ನಿಮಿಷ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಿಕೊಂಡು ಎಸ್ ಎಂದು ಹೇಳಿ. ಅವರು ಎಷ್ಟು ಕೋಟಿ ಜನ ಇದ್ದಾರೆ?

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ: ೩,೦೦೦ ರೂಪಾಯಿ ಕೊಡಬೇಕೆಂದು ಈಗಾಗಲೇ ನಿಯಮ ಇದೆ. ಆ ಪ್ರಕಾರ ನಾವು ಕೊಡುತ್ತಿದ್ದೇವೆ.

ಅಧ್ಯಕ್ಷರು : ನೀವು ಮಾನ್ಯ ಸಚಿವರ ಹತ್ತಿರ ಮಾತನಾಡಿ, ನೀವು ಮುಖ್ಯಮಂತ್ರಿಗಳು ಮತ್ತು ಸಚಿವರು ಮಾತನಾಡಿ ಪರಿಹಾರ ಕಂಡುಕೊಳ್ಳಿ.

ಶ್ರೀ ಐವಾನ್ ನಿಗ್ಲಿ : ಮಾನ್ಯ ಅಧ್ಯಕ್ಷರೆ, ೧೦೦ ಪರ್ಸೆಂಟ್ ಹೇಗೆ ಕೊಡುವುದಕ್ಕೆ ಬರುತ್ತದೆ ಎಂದು ಹೇಳಿದರೆ ಹೇಗೆ?